## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಡಿಕೇರಿ-ಕೊಡಗು

## ಸ್ಪೆಷಲ್(ಕರಪ್ಷನ್) ಕೇಸ್ ಸಂಖ್ಯೆ: 61/2016

ಸಾಕ್ಷಿದಾರರ ಹೆಸರು : ಎಂ ಎಸ್ ಜಯಶಂಕರ್

ಫ್ರಾಸಾಃ 4

ತಂದೆಯ ಹೆಸರು : ಎಂ ಆರ್ ಅನಂತರಾಮಯ್ಯ

ಚಾಸಾಃ 5

ವಯಸ್ಸು : 59 ವರ್ಷ

ವೃತ್ತಿ : AJM, SBI , Head office Bangalore

ವಾಸ : ಬೆಂಗಳೂರು

**ಸಾಕ್ಷಿಯನ್ನು ದಿನಾಂಕ 02-09-2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ದಿಃ 01.06.2012 ರಿಂದ ಜೂನ್ 2015 ರವರೆಗೆ ನಾನು ಚೀಪ್ ಮ್ಯಾನೇಜರ್ ಆಗಿ ಹೆಚ್ ಎಸ್ ಎಸ್ ಬಿ ಶಾಖೆಯಲ್ಲಿ ಸೇವೆ ಸಲ್ಲಿಸಿರುತ್ತೇನೆ. ದಿಃ 31.05.2013 ರಂದು ಮಡಿಕೇರಿಯ ಲೋಕಾಯುಕ್ತ ಪೊಲೀಸಿನವರು ನಮ್ಮ ಬ್ಯಾಂಕಿನ ಗ್ರಾಹಕರಾದ ಶ್ರೀಮತಿ ಕೆ ಎಂ ಇಂದಿರಾ ರವರ ಲಾಕರ್ ತೆಗೆಯುವ ಮಾಹಿತಿಯನ್ನು ಕೇಳಿದರು. ಪೊಲೀಸರ ಜೊತೆ ಸಂಬಂಧಪಟ್ಟ ಗ್ರಾಹಕರು ಕೂಡ ಬಂದಿದ್ದರಿಂದ ತನಿಖೆಗೆ ಪೂರಕವಾಗುವಂತೆ ಲಾಕರ್ ಅನ್ನು ಪರಿಶೀಲಿಸಲು ಅವಕಾಶ ಮಾಡಿಕೊಟ್ಟಿರುತ್ತೇನೆ. ಈ ಬಗ್ಗೆ ಲಾಕರ್ ರಿಜಿಸ್ಟರ್ ಅನ್ನು ಪೊಲೀಸರಿಗೆ ನೀಡಿರುತ್ತೇನೆ ಅದರಲ್ಲಿ ಗ್ರಾಹಕರಾದ ಕೆ ಎಂ ಇಂದಿರಾ ಇವರ ಹೆಸರಿನಲ್ಲಿ ಲಾಕರ್ ಸಂಖ್ಯೆ 25 ಜಿ ನೀಡಿರುವ ಬಗ್ಗೆ ರಿಜಿಸ್ಟರನ ಪ್ರತಿಯನ್ನು ನೀಡಿರುತ್ತೇನೆ. ಅದು ಈಗಾಗಲೇ ನಿಪಿ-102 ಎಂದು ಗುರುತಿಸಲ್ಪಟ್ಟಿದೆ . ನನ್ನ ಸಹಿಯನ್ನು ನಿಪಿ-102 (ಸಿ) ಎಂದು ಗುರುತಿಸಲಾಯಿತು. ಸದರಿ ಲಾಕರ್ ಅನ್ನು ತೆಗೆದು ನೋಡಲಾಗಿ ಗ್ರಾಹಕರಾದ ಇಂದಿರರವರಿಗೆ ಸಲ್ಲಿಸಿರುವ ಕೆಲವು ಆಭರಣಗಳು ಇದ್ದವು. ಪೊಲೀಸಿನವರ ಜೊತೆ ಅಕ್ಕಸಾಲಿಗರು ಬಂದಿದ್ದು ಸದರಿ ಆಭರಣಗಳು ಬಂಗಾರದ ಆಭರಣಗಳು ಎಂಬ ಬಗ್ಗೆ ಪರಿಶೀಲಿಸಿರುತ್ತಾರೆ. ಸದರಿ ಆಭರಣಗಳನ್ನು ಪೊಲೀಸಿನವರು ಆ ದಿನ

ಅಮಾನತ್ತುಪಡಿಸಿಕೊಂಡಿದ್ದು ಆ ಸಂದಬರ್ದಲ್ಲಿ ಬಂದ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ನಿಪಿ-101 ಎಂದು ಗುರುತಿಸಲಾಗಿದ್ದು , ನನ್ನ ಸಹಿಯನ್ನು ನಿಪಿ-101 (ಎಫ್) ಎಂದು ಗುರುತಿಸಲಾಯಿತು. ಆ ದಿನ ಅಮಾನತ್ತು ಪಡಿಸಿಕೊಂಡಿದ್ದ ಆಭರಣಗಳು ಈಗಾಗಲೇ ಮು. ಮಾ 1 ರಿಂದ 26 ಎಂದು ಗುರುತಿಸಲ್ಪಟ್ಟಿದೆ.

**ಪಾಟೀಸವಾಲು- ಆರೋಪಿ ಪರ ವಕೀಲರಿಂದ:**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದಾರೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಡಿಕೇರಿ- ಕೊಡಗು.